ಹೊರತು ಎಂದೂ ಅವರ ಮಾತುಗಳಲ್ಲಿ ಪಾಂಡಿತ್ಯ ಪ್ರದರ್ಶನವಿರುತ್ತಿರಲಿಲ್ಲ. ನೈತಿಕ ಮೌಲ್ಯಗಳು ಕುಸಿದಾಗ ಸಮಾಜ ಅಧಃಪತನಗೊಳ್ಳುತ್ತದೆ. ಶಾಸನಗಳು ನಿಷ್ಫಲಗೊಳ್ಳುತ್ತವೆ ಎಂಬುದನ್ನು ದೃಢವಾಗಿ ನಂಬಿದ ಅವರ ನಿಲುವು ಬರಹಗಳಲ್ಲಿ ಪ್ರಕಟವಾಗುತ್ತಲೇ ಇತ್ತು.

ಸುಮಾರು 80 ವರ್ಷ ದಾಟಿದ ಬಳಿಕ ಕೂಡ ಅವರ ಜೀವನೋತ್ಸಾಹ ಕುಂದಿರಲಿಲ್ಲ ಜೀವನ ಪ್ರೀತಿ ಕಡಿಮೆಯಾಗಿರಲಿಲ್ಲ. ಸಾರಾ ಬಗ್ಗೆ ಸ್ನೇಹಿತೆಯೊಬ್ಬರು ಒಂದು ಸಾಕ್ಷ್ಯಚಿತ್ರ ನಿರ್ಮಾಣ ಮಾಡಲು ಪ್ರಯತ್ನಿಸಿದ ಸಂದರ್ಭ ನನಗೆ ನೆನಪಾಗುತ್ತದೆ. ತನ್ನ ತವರು ಮನೆಯ ಸುತ್ತ ಮುತ್ತ ಓಡಾಡುವಾಗ ಅವರು 25ರ ಯುವತಿಯಂತೆ ಚುರುಕಾಗಿದ್ದರು. ಚಂದ್ರಗಿರಿ ಹೊಳೆಯಲ್ಲಿ ದೋಣಿವಿಹಾರ ಮಾಡುವಾಗ ಅವರ ಬಾಲ್ಯದ ನೆನಪುಗಳು ಹೊರ ಚಿಮ್ಮಿ ಅವರ ಅರಳಿದ ಮುಖವನ್ನು ನೋಡುವುದೇ ನಮಗೊಂದು ಅವಿಸ್ಮರಣೆಯವಾದ ದೃಶ್ಯವಾಗಿತ್ತು. ಅವರ ಬಂಧುಗಳ ದೊಡ್ಡ ಮನೆಯ ಚಾವಡಿಯಲ್ಲಿ ನಾವು ಊಟ ಮುಗಿಸಿ ತುಸು ಹೊತ್ತು ವಿಶ್ರಮಿಸಬೇಕೆಂದಿದ್ದರೂ ಸಾರಾಗೆ ತನ್ನ ಬಂಧುಗಳ, ಹಿರಿಯರ ಮನೆಯನ್ನು ತೋರಿಸುವ ತವಕವಿತ್ತು. ಮಾಯಂಗ, ಮಾಳಿಂಗಪುರ (ಮಾಳಿಗೆ ಮನೆ) ಮುಂತಾದ ಮನೆಗಳಿಗೆ ಮತ್ತು ತಳಂಗೆರೆಯಲ್ಲಿದ್ದ ಇತರ ಬಂಧುಗಳ ಮನೆಗಳನ್ನು ತೋರಿಸುವ ತವಕವಿತ್ತು. ಅಂದು ಇಡೀ ದಿನ ಅವರೊಂದಿಗೆ ಕಳೆದ ನೆನಪುಗಳು ಇನ್ನೂ ನನ್ನ ಸ್ಮೃತಿ ಪಟಲದಲ್ಲಿ ಭದ್ರವಾಗಿವೆ. ಹಿಂದೆ ಬರುವಾಗ ಅವರು ನನ್ನ ಕಿವಿಯಲ್ಲಿ ಹೇಳಿದ ಮಾತುಗಳು ಇನ್ನೂ ಅನುರಣಿಸುತ್ತಿವೆ.

'ನನ್ನ ಸ್ವಜಾತಿ ಬಾಂಧವರು ಯಾರೂ ನನ್ನ ಈ ಸಾಹಿತ್ಯ ಕೃಷಿಯನ್ನು ಮೆಚ್ಚುವವರಲ್ಲ, ಗೌರವಿಸುವವರೂ ಅಲ್ಲ. ನನ್ನನ್ನು ಈ ಮಟ್ಟಕ್ಕೆ ಬೆಳೆಸಿದ್ದೇ ಇತರ ಧರ್ಮದ ಬಂಧುಗಳು. ಅವರ ಋಣವನ್ನು ಈ ಜನ್ಮದಲ್ಲಂತೂ ತೀರಿಸಲಾರೆ. ಯಾರೂ ಕಾಣದ ಸ್ವರ್ಗದ ಆಸೆ ಹುಟ್ಟಿಸಿ ಧಾರ್ಮಿಕ ಗುರುಗಳು ಈ ಭೂಮಿಯನ್ನು ನರಕವಾಗಿಸಿ ಬಿಟ್ಟಿದ್ದಾರಲ್ಲಾ, ಅವರನ್ನು ಯಾರಾದರೂ ಮೇಲೆತ್ತಲೇ ಬೇಕಲ್ಲ? ನಾನು ಅವರನ್ನು ಮೇಲೆತ್ತಲು ಶಕ್ತಳಲ್ಲ, ಗೊತ್ತಿದೆ. ಆದರೆ, ಇಲ್ಲಿನ ಬದುಕು ನರಕವಾಗದಂತೆ ತಡೆಯುವ ವ್ಯವಸ್ಥೆಯೊಂದು ಈ ನಾಡಿನಲ್ಲಿದೆ ಎಂಬ ಅರಿವನ್ನಾದರೂ ಮೂಡಿಸಬೇಡವೇ? ಈ ಕೆಲಸವಷ್ಟೇ ನನ್ನಿಂದ ಮಾಡಲು ಸಾಧ್ಯವಾಗಿದೆ ಎಂದು ಭಾವಿಸಿದ್ದೇನೆ. ಮುಸ್ಲಿಂ ಹೆಣ್ಣು ಮಕ್ಕಳು ಈಗ ಶಿಕ್ಷಣಕ್ಕೆ ಹೆಚ್ಚು ಹೆಚ್ಚು ತೆರೆದುಕೊಂಡಿದ್ದಾರೆ. ಇದು ಸಂತೋಷದ ವಿಷಯ. ಆದರೆ, ಅವರು ಸ್ವಂತ ನಿರ್ಧಾರ ಕೈಗೊಳ್ಳುವ ಸ್ವಾತಂತ್ರ್ಯವನ್ನು ಕಳೆದುಕೊಂಡಿದ್ದಾರೆ ಎಂದು ನನಗನಿಸುತ್ತದೆ. ಹೆಚ್ಚು ಹೆಚ್ಚು ಸಂಪ್ರದಾಯವಾದಿಗಳಾಗುವುದೇ ಆಧುನಿಕರಣವೆಂದು ತಿಳಿದುಕೊಂಡಿದ್ದಾರೆಯೇ? ನಿಮಗೇನೇನಿಸುತ್ತದೆ?' ಹೀಗೆ ಸಂವಾದ ಮಾಡುತ್ತಾ ಊರಿಗೆ ಮರಳಿದ ಆ ಸಂದರ್ಭ ನನಗೆ ನೆನಪಾಗುತ್ತದೆ.

ವರ್ಷಗಳ ಹಿಂದೆ ನಾನು ಅವರು ರಂಗಾಯಣದ ನಾಟಕೋತ್ಸವಕ್ಕೆ ಹೋಗಿ ಮೂರು ದಿನ ಮೈಸೂರಿನಲ್ಲಿದ್ದೆವು. ಆಗ ಪ್ರಸನ್ನ ಅವರು ರಂಗಾಯಣದ ಅಧ್ಯಕ್ಷರಾಗಿದ್ದರು. ಇವರು ಖ್ಯಾತ ಲೇಖಕಿ ಎಂದು ಗುರುತಿಸಿದ ಕೆಲವು ಯುವಕ ಯುವತಿಯರು ಕೇಳಿದ ಪ್ರಶ್ನೆಗಳು ನನಗೆ ಕಿರಿಕಿರಿ ಎನಿಸತೊಡಗಿತ್ತು. ಸಾರಾ ಅವರು ಬುರ್ಖಾ ಹಾಕುವುದಿಲ್ಲ ಎಂದ ಮಾತ್ರಕ್ಕೆ ಅವರು ನಾಸ್ತಿಕರು ಎಂದು ಮೊದಲೇ ತೀರ್ಮಾನಿಸಿಕೊಂಡಂತೆ ಕೇಳಿದ ಪ್ರಶ್ನೆಗಳು ಎಷ್ಟು ಬಾಲಿಶವಾಗಿದ್ದವೆಂದರೆ ನಮಗೆ ನಗಬೇಕೊ, ಅಳಬೇಕೊ ಗೊತ್ತಾಗುತ್ತಿರಲಿಲ್ಲ. ಆಗ ಸಾರಾ ಅವರು, 'ನೀವು ನನ್ನ ಒಂದೆರಡಾದರೂ ಪುಸ್ತಕಗಳನ್ನು ಓದಿಕೊಂಡು ಬಂದಿದ್ದರೆ ಈ ಪ್ರಶ್ನೆ ಕೇಳುತ್ತಿರಲಿಲ್ಲ. ನನ್ನ ಕೆಲವು ಲೇಖನ ಸಂಕಲನಗಳು ಪ್ರಕಟವಾಗಿವೆ. ನಿಮ್ಮ ವಿಳಾಸ ಕೊಡಿ. ನೀವು ಬಯಸಿದರೆ ನಾನು ಕಳಿಸಿಕೊಡುತ್ತೇನೆ' ಎಂದು ಮಾತಿಗೆ ಮುಕ್ತಾಯ ಹಾಕಿದ್ದರು. ಕೆಲವು ಕಡೆಗಳಲ್ಲಿ ಅವರನ್ನು ಸಂದಿಗ್ಧಕ್ಕೆ ಸಿಲುಕಿಸುವುದಕ್ಕಾಗಿಯೇ ಪ್ರಶ್ನೆಗಳನ್ನು ಕೇಳಿದವರಿದ್ದಾರೆ. ಉತ್ತರಿಸಲಾಗದ ಪ್ರಶ್ನೆಗಳಿರುವಂತೆ ಕೇಳಬಾರದ ಪ್ರಶ್ನೆಗಳೂ ಇರುತ್ತವಲ್ಲಾ, ಇವೆಲ್ಲವನ್ನು ಜಾಣ್ಮೆಯಿಂದ ಬಗೆಹರಿಸುವ ಅವರ ಜಾಣ್ಮೆಗೆ ನಾನು ಬೆರಗಾಗಿದ್ದೇನೆ. ಜೀವನವೆಂದರೆ ಆಗಾಗ ಬಿಕ್ಕಟ್ಟುಗಳು ಉಂಟಾಗುತ್ತಲೇ ಇರುತ್ತವೆ. ಈ ಬಿಕ್ಕಟ್ಟುಗಳೊಂದಿಗೆ ವಿವೇಕಯುತವಾಗಿ ವರ್ತಿಸುವ ಜಾಣತನ